# ವಿದ್ಯಾಭ್ಯಾಸ : ಅಂದು- ಇಂದು

ಡಾ. ಡಿ.ಕೆ. ರಾಜೇಂದ್ರ

**ವಿ**ದ್ಯೆ ಕಲಿಯುವುದು ಒಂದು ಕಾಲಕ್ಕೆ ಜ್ಞಾನಾರ್ಜನೆಗೆಂದಾಗಿತ್ತು; ಜ್ಞಾನದಾಹವನ್ನು ಪೂರೈಸುವ ಪರಮೋದ್ದೇಶವನ್ನು ಅದು ಹೊಂದಿತ್ತು. ಹಾಗೆಯೇ ಬದುಕಿನ ಹಲವು ಆವಶ್ಯಕತೆಗಳನ್ನು ಪೂರೈಸುವ ಅಗತ್ಯವೂ ಅದಕ್ಕಿತ್ತು. ಅಂದಿನ ವಿದ್ಯಾಭ್ಯಾಸದ ಕ್ರಮ ಪ್ರಮುಖವಾಗಿ ಎರಡು ಸ್ತರಗಳಲ್ಲಿ ಹರಿದುಬಂದಿತ್ತು ಎಂದು ಹೇಳಬಹುದು. ಒಂದು, **ಜನಪದ ಸ್ತರದಲ್ಲಿ**. ಮತ್ತೊಂದು, **ಶಿಷ್ಟ ಸ್ತರದಲ್ಲಿ**. ಈ ಎರಡೂ ಸ್ತರಗಳ ವಿದ್ಯಾಭ್ಯಾಸದ ಕ್ರಮ ಮತ್ತು ಉದ್ದೇಶ ಬೇರೆಬೇರೆಯೇ ಆಗಿತ್ತು. ಅದು ಸಹಜ ಮತ್ತು ಅನಿವಾರ್ಯವಾಗಿತ್ತು ಎಂಬುದು ಆಯಾ ಕಲಿಕೆಯ ಹಿನ್ನೆಲೆಯಲ್ಲಿಯೇ ಸ್ಪಷ್ಟಗೊಳ್ಳುತ್ತದೆ. ಜನಪದ ಸ್ತರದ ವಿದ್ಯೆ ಬದುಕಿನ ಮೂಲದಿಂದ ಬಂದದ್ದು. ಅದು ಬದುಕಿಗೆ ಅಗತ್ಯವಾದುದನ್ನು, ಅನಿವಾರ್ಯವಾದುದನ್ನು ಕಲಿಸಿಕೊಡುವಂಥದಾಗಿತ್ತು. ಇಡೀ ಬದುಕು ಹಾಗೂ ಸಮಾಜವೇ ಅದರ ಕಾರ್ಯಕ್ಷೇತ್ರವಾಗಿತ್ತು. ಅದು ನಾಲ್ಕು ಗೋಡೆಗಳ ಮಧ್ಯದ ಕಲಿಕೆಯಾಗಿರಲಿಲ್ಲ. ಅದೊಂದು ತೆರೆದ ವಿಶ್ವವಿದ್ಯಾನಿಲಯ. ಇಡೀ ಪರಿಸರವೇ ಅದರ ಪಠ್ಯಕ್ರಮ ಹಾಗೂ ವಿದ್ಯಾಶಾಲೆ.

ಜನಪದ ಸ್ತರದ ಕಲಿಕೆಯ ವಿಧಾನ ವಿಶಿಷ್ಟವಾದದ್ದು. ನೋಡುನೋಡುತ್ತ, ಕೇಳುಕೇಳುತ್ತ ಕಲಿಯುವುದು ಇಲ್ಲಿಯ ಕ್ರಮ. ಇಲ್ಲಿ ಎಲ್ಲವೂ ಕರ್ಣಾಕರ್ಣಿಯಾಗಿ, ಕಂಠಸ್ಥವಾಗಿ, ಅಭ್ಯಾಸದಿಂದ ಕರಗತವಾದದ್ದು. ಇಲ್ಲಿ ಯಾವ ಪುಸ್ತಕದ ಗೋಜೂ ಕಂಡು ಬರುವುದಿಲ್ಲ. ಎಲ್ಲವೂ ಮಸ್ತಕದಲ್ಲಿಯೇ ದಾಖಲಾಗಿ ಉಳಿಯುವಂತಹುದನ್ನು, ಬೆಳೆಯುವಂತಹುದನ್ನು ಕಾಣುತ್ತೇವೆ. ಹಾಗೆಂದು ಜನಪದರೇ ಅತ್ಯಂತ ವಿನಯದಿಂದ ಹೇಳಿಕೊಳ್ಳುತ್ತಾರೆ:

**ಹಲಗೇಯ ಹಿಡಿದಿಲ್ಲ ಬಳಪಾದಿ ಬರೆದಿಲ್ಲ**
**ಶ್ರೀಗುರು ನಮಗೆ ಕಲಿಸಿಲ್ಲ ತಾಯಿಗಳಿರ**
**ಲೆಖ್ಖಣಿಕೆ ನಮಗೆ ಗೊತ್ತಿಲ್ಲ**

ಆ ವಿದ್ಯೆ ಸ್ವತಂತ್ರವಾಗಿ, ಸಮೃದ್ಧಿಯಾಗಿ ಬದುಕಲು ನೆರವಾಗುವಂತಹುದಾಗಿತ್ತು. ಜೊತೆಗೆ ಜನರ ಬೌದ್ಧಿಕ ಹಾಗೂ ಮಾನಸಿಕ ಶ್ರೀಮಂತಿಕೆಗೂ ಕಾರಣವಾಗಿತ್ತು.

ಸ್ವಾಮಿ ವಿವೇಕಾನಂದರು ಹೇಳುವ ವಿದ್ಯಾಭ್ಯಾಸದ ಕ್ರಮ ವ್ಯಕ್ತಿಯ ವ್ಯಕ್ತಿತ್ವದ ಸರ್ವತೋಮುಖವಾದ ಬೆಳವಣಿಗೆಗೆ ಪೂರಕವಾದುದು. ಅವರು ಹೇಳುತ್ತಾರೆ: "ವಿದ್ಯಾಭ್ಯಾಸವೆಂದರೆ ನಿಮ್ಮ ತಲೆಗೆ ತುಂಬಿದ ವಿಷಯಗಳ ಮೊತ್ತವಲ್ಲ. ಅದು ಅಲ್ಲಿ ಜೀರ್ಣವಾಗದೆ ಚೆಲ್ಲಾಪಿಲ್ಲಿಯಾಗಿ ಉಳಿದಿರುವುದು. ಜೀವನವನ್ನು ನಿರ್ಮಾಣ ಮಾಡುವಂತಹ, ಪುರುಷಸಿಂಹರನ್ನು ಸೃಷ್ಟಿ ಮಾಡುವಂತಹ, ಶೀಲಸಂಪತ್ತಿಗೆ ಸಹಾಯ ಮಾಡುವಂತಹ, ವಿಚಾರಗಳನ್ನು ಗ್ರಹಿಸುವಂತಹ ವಿದ್ಯಾಭ್ಯಾಸ ನಮಗೆ ಬೇಕು."

ಸ್ವಾಮಿ ವಿವೇಕಾನಂದರ ಈ ಎಲ್ಲಾ ಆಶಯಗಳೂ ಜನಪದ ವಿಶ್ವವಿದ್ಯಾನಿಲಯದಲ್ಲಿ ಸಾಕಾರಗೊಂಡಿರುವುದನ್ನು ಕಾಣಬಹುದು. ಜನಪದ ಬೇಸಾಯ, ಜನಪದ ವೈದ್ಯ, ಜನಪದ ಕಲೆ, ಜನಪದ ಸಾಹಿತ್ಯ ಇತ್ಯಾದಿಗಳನ್ನು ಪರಿಶೀಲಿಸಿದಾಗ ಆ ಸಾಮಾನ್ಯ ಜನರ ಪ್ರತಿಭೆ ಎಷ್ಟೆಂಬುದು ಗೋಚರಿಸುತ್ತದೆ. ಸಾವಿರಾರು ಪುಟಗಳ ಸಾಹಿತ್ಯ ಅವರ ಮಸ್ತಕದಲ್ಲಿಯೇ ತುಂಬಿರುವುದನ್ನು ಇಂದಿಗೂ ಕಾಣಬಹುದು. ಕಿವಿಯಿಂದ ಕಿವಿಗೆ ಕಂಠಸ್ಥವಾಗಿ ಹರಿದುಬಂದ ಈ ಸಾಹಿತ್ಯದ ಸೊಗಸೇ ಬೇರೆ!

ಜನಪದ ವಿಶ್ವವಿದ್ಯಾನಿಲಯದಲ್ಲಿ ಇದೆಲ್ಲವನ್ನೂ ಕಲಿಸಲು ಸಾಧ್ಯವಾದುದು ಹೇಗೆ ? ಇದು ಮುಖ್ಯ ಪ್ರಶ್ನೆ. ಅದಕ್ಕೆ ಸಿಕ್ಕುವ ಉತ್ತರ – **ಶ್ರದ್ಧೆ, ಏಕಾಗ್ರತೆ ಮತ್ತು ಅನಿವಾರ್ಯತೆ**. ಯಾವುದೇ ವಿದ್ಯೆಯನ್ನು ಕಲಿಯಲು ಈ ಮೂರು ಅಂಶಗಳು ಬಹು ಮುಖ್ಯವಾದುವು. ಜನಪದ ವಿದ್ಯಾಭ್ಯಾಸ ಕ್ರಮದಲ್ಲಿ ಅವುಗಳನ್ನು ಕಾಣುತ್ತೇವೆ. ಏಕೆಂದರೆ ಯಾವ ಪಠ್ಯವಾಗಲಿ, ಗೈಡ್‌ಗಳಾಗಲಿ, ಪರೀಕ್ಷೆಗಳಾಗಲಿ ಇಲ್ಲದೆ, ಕೇವಲ ಕಣ್ಣು, ಕಿವಿ, ಮನಸ್ಸು – ಈ ಮೂರರ ನೆರವಿನಿಂದ ಕಲಿಯುವ ಕ್ರಮ ಇಲ್ಲಿಯದು. ಇಂತಹ ವಿಶ್ವವಿದ್ಯಾನಿಲಯದಿಂದ ಹೊರಬಂದವರು ನಿರುದ್ಯೋಗಿಗಳಾಗಲು ಸಾಧ್ಯವಿಲ್ಲ. ಹಸಿವಿನಿಂದ ದಿಕ್ಕುಕಾಣದೆ ಬದುಕಬೇಕಾದ ಅಗತ್ಯವಿರುವುದಿಲ್ಲ. 'ಪ್ರತಿಯೊಬ್ಬ ವಿದ್ಯಾರ್ಥಿಯೂ ಓರ್ವ ತಪಸ್ವಿ' ಎಂಬ ಕವಿವಾಣಿ ಇಲ್ಲಿಯ ಒಬ್ಬೊಬ್ಬ ವಿದ್ಯಾರ್ಥಿಯ ವಿಷಯದಲ್ಲಿಯೂ ಅನ್ವರ್ಥವಾಗಿ ತೋರುತ್ತದೆ.

ಇನ್ನು ಶಿಷ್ಟ ಸ್ತರದ ವಿದ್ಯಾಭ್ಯಾಸ ಕ್ರಮಕ್ಕೆ ಬಂದರೆ ಇದರ ಪರಿಯೇ ಬೇರೆ. ಇದು ಋಷಿಮುನಿಗಳ ಮೂಲಕ ಗುರುಕುಲಗಳಲ್ಲಿ ನೀಡಲಾಗುತ್ತಿದ್ದ ವಿದ್ಯೆ. ಬದುಕಿಗೆ ಬೇಕಾದುದನ್ನೂ, ಬದುಕಿನ ನಂತರವೂ ಪಡೆಯಬೇಕಾದುದನ್ನೂ ಗಳಿಸಲು ಸಹಾಯಕವಾದುದನ್ನು ಕಲಿಸುವ ವಿದ್ಯೆ ಇದಾಗಿತ್ತು. ಜನಪದ ಸ್ತರದ ವಿದ್ಯಾಭ್ಯಾಸಕ್ಕೆ ಹೋಲಿಸಿದರೆ ಇದು ಅಲ್ಪಸಂಖ್ಯಾತರನ್ನು ಒಳಗೊಂಡದ್ದು, ಒಂದು ವರ್ಗದವರಿಗೆ ಮಾತ್ರ ಸೀಮಿತವಾಗಿದ್ದದ್ದು ಎಂದು ಹೇಳಬಹುದು. ಆದರೆ ಕಲಿಕೆಯ ವಿಧಾನ ಮಾತ್ರ

ಮಾನ್ಯ ಲೇಖಕರು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು; ಆ ಸಂಸ್ಥೆಯ ನಿರ್ದೇಶಕರೂ ಆಗಿ ನಿವೃತ್ತರಾದರು. ಸಧ್ಯ ಇವರು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಗೌರವ ನಿರ್ದೇಶಕರು.

ಅನುಕರಣೀಯ; **ಶಿಸ್ತು, ಗುರುಶಿಷ್ಯರ ಸಂಬಂಧ** – ಇವುಗಳಿಗೆ ಸಂಬಂಧಿಸಿದಂತೆ ಇದು ಆದರ್ಶಪ್ರಾಯ. ಆಲ್ಬರ್ಟ್ ಐನ್‌ಸ್ಟೈನ್ ಹೇಳುವಂತೆ, "ಯಶಸ್ವಿ ವ್ಯಕ್ತಿಯಾಗುವುದಕ್ಕಿಂತ ಮೌಲ್ಯವಂತ ವ್ಯಕ್ತಿಯಾಗುವುದಕ್ಕೆ ಪ್ರಯತ್ನಿಸಿ" ಎಂಬ ಆಶಯಕ್ಕೆ ಪೂರಕವಾದ ವಿದ್ಯೆಯನ್ನು ನೀಡುವ ಕ್ರಮ ಇಲ್ಲಿಯದು.

ಶಿಷ್ಟ ಸ್ತರದ ಮುಂದುವರಿಕೆಯೇ ಆಧುನಿಕ ವಿದ್ಯಾಭ್ಯಾಸ ಕ್ರಮ. ಆದರೆ ಇದು ಹಿಂದಿನ ಎಲ್ಲಾ ಕ್ರಮಗಳನ್ನೂ ಮುರಿದು ತನ್ನದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡಿತು. ಜನಪದ ಸ್ತರದ ಅನಕ್ಷರ ಜ್ಞಾನಕ್ಕೆ ಬದಲಾಗಿ ಅಕ್ಷರಜ್ಞಾನವನ್ನು ವ್ಯಾಪಕವಾಗಿ ಬಳಕೆಗೆ ತಂದಿತು. ಶಿಷ್ಟ ಸ್ತರದ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಸಾಕಷ್ಟು ಹಿಗ್ಗಿಸಿತು. ಆಧುನಿಕ ವಿದ್ಯಾಭ್ಯಾಸ ಇಂದು ನಾಗಾಲೋಟದಲ್ಲಿ ಸಾಗುತ್ತ ಬೆಳೆದಿದೆ. ಅದಕ್ಕೆ ಮಿತಿಯೇ ಇಲ್ಲವೆಂಬಂತಾಗಿದೆ. ಅದು ಅಧ್ಯಯನದ ಪರಿಧಿಯನ್ನು ಹೆಚ್ಚಿಸಿದೆ; ಜ್ಞಾನದ ಬಾಗಿಲುಗಳನ್ನು ವ್ಯಾಪಕವಾಗಿ ತೆರೆದಿದೆ. ಇದರಿಂದಾಗಿ ಅಚ್ಚರಿಯ, ಕುತೂಹಲದ ನೂತನ ಜಗತ್ತಿನ ಕಿಟಕಿ ಬಾಗಿಲುಗಳು ತೆಗೆದುಕೊಂಡು ಸರ್ವರನ್ನೂ ಕೈಬೀಸಿ ಕರೆಯುವಂತಾಗಿದೆ.

ಆದರೆ ಆಧುನಿಕ ವಿದ್ಯೆಯು ಬದುಕಿಗೆ ಬೇಕಾದ ಮೌಲ್ಯಗಳನ್ನು ಕೊಡುವುದನ್ನಾಗಲಿ ಅಥವಾ ಬದುಕಿನ ನಂತರ ಬೇಕಾದುದನ್ನು ಕಲಿಸುವುದನ್ನಾಗಲಿ ಕಡೆಗಣಿಸಿದೆ; ಕೇವಲ ಪದವಿಯನ್ನು ನೀಡಿ ಪದವೀಧರನ್ನಾಗಿಸುವಲ್ಲಿ ಮಾತ್ರವೇ ನಿರತವಾಗಿದೆ. ಎಲ್ಲರನ್ನೂ ಅಕ್ಷರಸ್ಥರನ್ನಾಗಿಸಿ ಅವರ ಬೌದ್ಧಿಕ ಮಟ್ಟವನ್ನು ವೃದ್ಧಿಗೊಳಿಸುವುದರ ಮೂಲಕ ಅವರ ಮಸ್ತಕವನ್ನು ತುಂಬುತ್ತಿದೆಯೇ ಹೊರತು, ಅವರನ್ನು ಹೃದಯವಂತರನ್ನಾಗಿಸುವಲ್ಲಿ ವಿಫಲವಾಗುತ್ತಿದೆ; ಸಾಹಸಿಗಳನ್ನಾಗಿಸುವಲ್ಲಿ ಮತ್ತು ಧೈರ್ಯವಂತರನ್ನಾಗಿಸುವಲ್ಲಿ ಸೋಲುತ್ತಿದೆ.

ಆಧುನಿಕ ವಿದ್ಯಾಭ್ಯಾಸದ ಮೂಲಕ ನಾವು ಜ್ಞಾನವಂತರಾಗುತ್ತಿದ್ದೇವೆ, ನಿಜ. ಆದರೆ ಹೃದಯವಂತಿಕೆಯನ್ನು ಕಳೆದುಕೊಳ್ಳುತ್ತಿದ್ದೇವೆ. ಇಂದು ನಾವು ಕಲಿಯುತ್ತಿರುವ ವಿದ್ಯೆ ಉದ್ಯೋಗಕ್ಕೆ ಕಾರಣವಾಗಬಹುದೆಂಬುದು ನಿಜವಾದರೂ, ಅನೇಕ ಸಂದರ್ಭಗಳಲ್ಲಿ ವಿದ್ಯೆಗೂ ಉದ್ಯೋಗಕ್ಕೂ ಯಾವ ತಾಳೆಯೂ ಇರುವುದಿಲ್ಲ. ಬದುಕಿಗೂ ವಿದ್ಯೆಗೂ ಸಂಬಂಧ ಕಾಣದಾಗಿರುವಂತೆ, ವಿದ್ಯೆಗೂ ವೃತ್ತಿಗೂ ಸಂಬಂಧವಿಲ್ಲದಂತಾಗುತ್ತಿದೆ.

ಸ್ವಾಮಿ ವಿವೇಕಾನಂದರ ವಾಣಿಯೊಂದು ಹೀಗಿದೆ: "ಆದರ್ಶದ ಮೇಲೆ ಅಭಿಮಾನ ಇರಬೇಕು. ಇದೇ ಮೊದಲನೆಯ, ಮುಖ್ಯವಾದ ಮೆಟ್ಟಿಲು. ಆನಂತರ ಎಲ್ಲವೂ ಸುಲಭವಾಗುವುದು". ಆದರೆ ಇಂದು ಕೊರತೆ ಎದ್ದು ಕಾಣುತ್ತಿರುವುದು ಇಲ್ಲಿಯೇ. ಇಂದಿನ ವಿದ್ಯೆ ಅದರತ್ತ ಗಮನ ಕೊಡುತ್ತಿಲ್ಲ. ಇಂದಿನ ಯುವಕರು ದೊಡ್ಡ ದೊಡ್ಡ ವಿಜ್ಞಾನಿಗಳಾಗುತ್ತಿದ್ದಾರೆ, ಡಾಕ್ಟರ್‌ಗಳಾಗುತ್ತಿದ್ದಾರೆ, ಕಂಪ್ಯೂಟರ್ ಇಂಜಿನಿಯರ್‌ಗಳಾಗುತ್ತಿದ್ದಾರೆ. ಇವೆಲ್ಲವೂ ನಿಜ. ಆದರೆ ಆದರ್ಶಗಳನ್ನು ಗಾಳಿಗೆ ತೂರುತ್ತಿದ್ದಾರೆ; ಮಾನವೀಯತೆಯನ್ನು ಮರೆಯುತ್ತಿದ್ದಾರೆ. ಆದರ್ಶವು ಮನುಷ್ಯನನ್ನು ಹೃದಯವಂತನನ್ನಾಗಿಸುತ್ತದೆ ಎಂಬುದನ್ನು ನಾವು ಮರೆತಂತೆ ತೋರುತ್ತದೆ.

ಇದು ಪೈಪೋಟಿಯ ಯುಗ. ಎಲ್ಲಾ ರಂಗಗಳಲ್ಲಿಯೂ ಅದನ್ನು ಕಾಣುತ್ತೇವೆ. ಹಾಗಾಗಿ ಹೆಚ್ಚಿನ ಅಂಕ ಗಳಿಸುವ ಕಡೆಗೇ ಎಲ್ಲರ ಗಮನ. ಜೀವನಮೌಲ್ಯಗಳ ಕಡೆಗೆ, ಆದರ್ಶಗಳ ಕಡೆಗೆ ಇಲ್ಲಿ ಅವಕಾಶ ಇಲ್ಲದಂತಾಗಿದೆ. ಇದೇ ರೀತಿ ನಾವು ಮುಂದುವರಿದರೆ ಕಂಪ್ಯೂಟರ್‌ಗೂ ಮನುಷ್ಯನಿಗೂ ವ್ಯತ್ಯಾಸವಿಲ್ಲದಂತಾಗುತ್ತದೆ! ಯಂತ್ರಮಾನವರ ಸಂಖ್ಯೆ ಬೆಳೆಯುತ್ತಾ ಸಾಗುತ್ತದೆ!

ಮಾನವನಲ್ಲಿ ಜ್ಞಾನ ಅಂತರ್ಗತವಾಗಿಯೇ ಇದೆ. ಅದಕ್ಕೆ ಪ್ರಚೋದನೆ ಹಲವು ರೂಪದಲ್ಲಿ ಹೊರಗಿನಿಂದ ದೊರೆಯುತ್ತದೆ, ಅಷ್ಟೆ. ಆ ರೀತಿಯ ಶಿಕ್ಷಣವನ್ನು ನಾವು ನೀಡಬೇಕಾಗಿದೆ. ಜ್ಞಾನಾರ್ಜನೆ ಕೇವಲ ಬದುಕಿಗೆ ದಾರಿಗೆ ಮಾಡಿಕೊಟ್ಟರಷ್ಟೇ ಸಾಲದು. ಅದು ಶೀಲಾರ್ಜನೆಗೂ ನೆರವಾಗಬೇಕು. ಇಂತಹ ಗುಣಗಳನ್ನು ಕಲಿಸದ ಶಿಕ್ಷಣ ನಿಷ್ಪ್ರಯೋಜಕ. ಉಚ್ಚ ಶಿಕ್ಷಣವನ್ನು ಪಡೆದು ವಿವಿಧ ಕ್ಷೇತ್ರಗಳಲ್ಲಿ ಕೆಲಸಮಾಡುತ್ತಿರುವ ಉನ್ನತ ಹುದ್ದೆಯ ಅಧಿಕಾರಿಗಳ ವರ್ತನೆಯನ್ನು ಕಂಡಾಗ ಬೇಸರ ಮೂಡುತ್ತದೆ, ನಮ್ಮ ಶಿಕ್ಷಣಕ್ರಮದ ಬಗ್ಗೆ ಜಿಗುಪ್ಸೆ ಮೂಡುತ್ತದೆ. ಅಧಿಕಾರ ಇರುವುದು ಮೆರೆಯುವುದಕ್ಕೆ, ಹಣ ಗಳಿಸುವುದಕ್ಕೆ ಎಂದೇ ಹಲವರು ಭಾವಿಸಿದಂತೆ ತೋರುತ್ತದೆ. ಅದರಂತೆಯೇ ಅವರು ವರ್ತಿಸುತ್ತಾರೆ. ಶಿಕ್ಷಣ ಅವರ ಮೇಲೆ ಯಾವುದೇ ಪ್ರಭಾವವನ್ನು ಬೀರಿದಂತೆ ತೋರುವುದಿಲ್ಲ.

ನಿಜವಾದ ಶಿಕ್ಷಣ ಯಾವುದು? ಹೇಗಿರಬೇಕು? ಎಂಬುದರ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ನನ್ನ ದೃಷ್ಟಿಯಲ್ಲಿ ವಿದ್ಯಾಭ್ಯಾಸದ ಸಾರವೇ ಮನಸ್ಸಿನ ಏಕಾಗ್ರತೆಯಲ್ಲಿರುವುದು: ವಿಷಯ ಸಂಗ್ರಹದಲ್ಲಿ ಅಲ್ಲ. ನಾನೇನಾದರೂ ಮತ್ತೆ ವಿದ್ಯಾಭ್ಯಾಸವನ್ನು ಮಾಡಬೇಕಾದರೆ, ಅಲ್ಲಿ ನನಗೇನಾದರೂ ಸ್ವಾತಂತ್ರ್ಯವಿದ್ದರೆ, ನಾನು ವಿಷಯಗಳನ್ನು ಕಲಿಯುವುದೇ ಇಲ್ಲ. ಅದಕ್ಕೆ ಬದಲು ಏಕಾಗ್ರತೆ ಮತ್ತು ಅನಾಸಕ್ತಿಯ ಶಕ್ತಿಯನ್ನು ರೂಢಿಸಿಕೊಂಡು ಅನಂತರ ಬೇಕಾದಾಗ ವಿಷಯಸಂಗ್ರಹ ಮಾಡುವೆನು".

ಅಕ್ಷರ ಕಲಿತವರೆಲ್ಲ ವಿದ್ಯಾವಂತರಲ್ಲ. ಅವರು ಅಕ್ಷರಸ್ಥರು ಅಷ್ಟೆ. ಕಲಿತ ವಿದ್ಯೆಯನ್ನು ಸಫಲಗೊಳಿಸಿಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯ. ಅದು ಅವನ ಬುದ್ಧಿಯನ್ನು ವಿಕಾಸಗೊಳಿಸಿದಂತೆ, ಹೃದಯವನ್ನೂ ಅರಳಿಸುವಂತಾಗಬೇಕು, ಮಾನವೀಯ ಗುಣಗಳನ್ನು ಬೆಳೆಸುವಂತಿರಬೇಕು. ಇಲ್ಲವಾದರೆ, ಸ್ವಾಮಿ ವಿವೇಕಾನಂದರೇ ಹೇಳುವಂತೆ "ವಿಷಯಸಂಗ್ರಹವೇ ವಿದ್ಯಾಭ್ಯಾಸವಾದರೆ, ಪುಸ್ತಕ ಭಂಡಾರಗಳೇ ಶ್ರೇಷ್ಠ ಜ್ಞಾನಿಗಳಾಗುತ್ತಿದ್ದುವು, ವಿಶ್ವಕೋಶಗಳೇ ಋಷಿಗಳಾಗಿರುತ್ತಿದ್ದವು."

ಗಿಳಿಪಾಠ ಯಾವುದಕ್ಕೂ ಪ್ರಯೋಜನಕ್ಕೆ ಬರುವುದಿಲ್ಲ. ಕಲಿತದ್ದು ಸಫಲವಾಗಿ ಕಾರ್ಯಗತಗೊಳ್ಳಬೇಕು. ಆಗಲೇ ಶಿಕ್ಷಣದ ನಿಜವಾದ ಗುರಿ ಸಾಧನೆಯಾದಂತಾಗುತ್ತದೆ.